

## ಯಜಮಾನನ ಸೌಂಡು

ಯಜಮಾನಿಕೆ ತೋರಿಸುವುದನ್ನು ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರಿಗೆ ಯಾರೂ ಹೇಳಿಕೊಡಬೇಕಿಲ್ಲ. ಯಜಮಾನಿಕೆಯ ಗತ್ತು, ಗಾಂಭೀರ್ಯ ಅವರ ಸ್ವಭಾವದಲ್ಲಿಯೇ ಇದೆ. ಅದಕ್ಕೆ ಅನ್ವರ್ಥಕ ಎನ್ನುವಂತೆ ಅವರು ಸದ್ಯ 'ಯಜಮಾನ' ಎಂಬ ಸಿನಿಮಾದಲ್ಲಿ ನಟಿಸುತ್ತಿರುವುದೂ ಎಲ್ಲರಿಗೂ ಗೊತ್ತಿರುವ ಸಂಗತಿಯೇ.

ಲೆಕ್ಕಾಚಾರದ ಪ್ರಕಾರ 'ಯಜಮಾನ' ಚಿತ್ರೀಕರಣ ಇಷ್ಟರಲ್ಲಾಗಲೇ ಮುಗಿಯಬೇಕಿತ್ತು. ಆದರೆ ಮೈಸೂರಿನ ಸಮೀಪ ಆದ ಕಾರು ಅಪಘಾತದಲ್ಲಿ ದರ್ಶನ್ ಕೈಗೆ ಪೆಟ್ಟಾಗಿದ್ದರಿಂದ ವಿದೇಶದಲ್ಲಿ ನಡೆಯಬೇಕಿದ್ದ ಚಿತ್ರೀಕರಣ ಮುಂದಕ್ಕೆ ಹೋಗಿದೆ. ಅಭಿಮಾನಿಗಳ ಹೃದಯದ ಯಜಮಾನ ಈಗ ಜಗದ ಯಜಮಾನನ ಸನ್ನಿಧಿಗೆ ಪದೇಪದೇ ಹೋಗುತ್ತಿದ್ದಾರೆ. ವಿಶ್ರಾಂತಿಯಲ್ಲಿ ಸಾಲು ಸಾಲು ದೇವರ ದರ್ಶನ ಮಾಡುತ್ತಿದ್ದಾರೆ ದರ್ಶನ್.

ಶೈಲಜಾ ನಾಗ್ ಮತ್ತು ಬಿ. ಸುರೇಶ ನಿರ್ಮಾಣದ ಈ ಸಿನಿಮಾದಲ್ಲಿ ದೊಡ್ಡ ತಾರಾಬಳಗವೇ ಇದೆ. ರಶ್ಮಿಕಾ ಮಂದಣ್ಣ ಮತ್ತು ತಾನ್ಯಾ ಹೋಪ್ ನಾಯಕಿಯರಾಗಿ ನಟಿಸಿದ್ದಾರೆ. ಕುಮಾರ್ ಆ್ಯಕ್ಷನ್–ಕಟ್ ಹೇಳಿರುವ ಈ ಸಿನಿಮಾಕ್ಕೆ ಹರಿಕೃಷ್ಣ ಸಂಗೀತ ನಿರ್ದೇಶಕನಾಗಿಯಷ್ಟೇ ಅಲ್ಲ, ಇಡೀ ಚಿತ್ರದ ರೂಪುರೇಷೆಯ ಹಿಂದಿನ ಶಕ್ತಿಯಾಗಿ ಕೆಲಸ ಮಾಡಿದ್ದಾರೆ ಎಂದು ಸ್ವಂತ ನಿರ್ಮಾಪಕರೇ ಹೇಳಿಕೊಂಡಿದ್ದಾರೆ.

ನಗರ ಮತ್ತು ಹಳ್ಳಿ ಎರಡೂ ಕಡೆಗಳಲ್ಲಿ 'ಯಜಮಾನ'ನ ಕಥಾಹಸ್ತ ಚಾಚಿಕೊಂಡಿದೆಯಂತೆ. ಇತ್ತೀಚೆಗೆ ಬಿಡುಗಡೆಯಾದ ಪೋಸ್ಟರ್‌ನಲ್ಲಿ ದರ್ಶನ್, ಶ್ರವಣಕುಮಾರನ ಹಾಗೆ ಹೆಗಲ ಮೇಲೆ ಕೋಲು ಕಟ್ಟಿ ಅದರ ಎರಡೂ ತುದಿಗಳಲ್ಲಿ ಒಂದಿಷ್ಟು ಡಬ್ಬಿಗಳನ್ನು ಕಟ್ಟಿಕೊಂಡಿದ್ದರು. ಬಹುಶಃ ಈ ಡಬ್ಬಿಗಳು ಜೋರು ಸೌಂಡು ಮಾಡುವ ಸೂಚನೆ ಇದ್ದರೂ ಇರಬಹುದು.

## ಇಂದ್ರಬಾಬು ಹೊಸ ಷೋ



'ಕಬಡ್ಡಿ', 'ಸಂತೆಯಲ್ಲಿ ನಿಂತ ಕಬೀರ'ದಂಥ ಉಜ್ವಲ ಸಿನಿಮಾಗಳನ್ನು ಕೊಟ್ಟಿದ್ದ ನಿರ್ದೇಶಕ ಇಂದ್ರಬಾಬು 'ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಸಿನಿಮಾದಲ್ಲಿ ಕೊಂಚ ಎಡವಿದ್ದರು. ಇಂಗ್ಲಿಷಿನ ಚಿತ್ರವೊಂದರ ಕನ್ನಡ ಅವತರಣಿಕೆಯಲ್ಲಿ ಅನಂತ್‌ನಾಗ್ ಮತ್ತು ರಾಧಿಕಾ ಚೇತನ್ ಅಭಿನಯಿಸಿದ್ದರು.

ಹಿಂದಿನ ಸಿನಿಮಾದ ಸೋಲಿನ ನೋವನ್ನು ಮರೆತಿರುವ ಅವರೀಗ ಹೊಸ ಸಿನಿಮಾ ಕೆಲಸದಲ್ಲಿ ಮುಳುಗಿದ್ದಾರೆ. ಈ ಸಲ ಒಂದು ಸೂಕ್ಷ್ಮ ಸಂವೇದನೆಯ ಸಿನಿಮಾದೊಂದಿಗೆ ಪ್ರೇಕ್ಷಕರ ಮುಂದೆ ಬರಬೇಕು ಎಂಬ ನಿರ್ಧಾರ ಅವರ ಮನಸಿನಲ್ಲಿದೆ.

ತೆಲುಗಿನ ಕೃಪಲಾನಿ ಗೋಪಿಚಂದ್ ಅವರ ಕಾದಂಬರಿಯೊಂದನ್ನು ಸಿನಿಮಾ ಚೌಕಟ್ಟಿಗೆ ಒಗ್ಗಿಸುವುದರಲ್ಲಿ ಅವರೀಗ ತೊಡಗಿಕೊಂಡಿದ್ದಾರೆ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಈ ಸಿನಿಮಾದ ಹಾಡುಗಳ ಧ್ವನಿಮುದ್ರಣ ಈಗಾಗಲೇ ಮುಗಿದಿದೆ. ಚಿತ್ರಕಥೆ ಬರೆಯುವ ಕೆಲಸ ಜೋರಾಗಿ ನಡೆಯುತ್ತಿದೆ. ನವೆಂಬರ್ 20ರಿಂದ ವಿಶಾಖಪಟ್ಟಣದಲ್ಲಿ ಚಿತ್ರೀಕರಣ ಆರಂಭಿಸುವ ಯೋಜನೆಯನ್ನೂ ಇಂದ್ರಬಾಬು ಹಾಕಿಕೊಂಡಿದ್ದಾರೆ. ಇದು ಮಹಿಳಾಪ್ರಧಾನ ಚಿತ್ರ. 'ಟಗರು' ಚಿತ್ರದಲ್ಲಿ ಕಾನ್‌ಸ್ಟೆಬಲ್ ಸರೋಜಾ ಆಗಿ ಸುದ್ದಿ ಮಾಡಿದ್ದ ತ್ರಿವೇಣಿ ರಾವ್ ಈ ಚಿತ್ರದ ಮುಖ್ಯಪಾತ್ರದಲ್ಲಿ ಇರಲಿದ್ದಾರೆ.

ಈ ಚಿತ್ರದಲ್ಲಿ ಎಂಟು ಮುಖ್ಯ ಪಾತ್ರಗಳು ಇರಲಿವೆ. ತೆಲುಗು ಮತ್ತು ಕನ್ನಡ ಎರಡೂ ಭಾಷೆಯ ನಟರೂ ನಟಿಸಲಿದ್ದಾರೆ. ರಂಗಭೂಮಿಯ ಕಲಾವಿದರಿಗಂತೂ ಇಂದ್ರಬಾಬು ಸಿನಿಮಾದಲ್ಲಿ ಜಾಗವಿದ್ದೇ ಇರುತ್ತದೆ. 'ಕನ್ನಡದಲ್ಲಿ ಕುವೆಂಪು ಹೇಗೆ ವೈಚಾರಿಕತೆಯನ್ನು ಬಿತ್ತುವ ಕೃತಿಯ ಮೂಲಕ ಅಜರಾಮರ ಆಗಿದ್ದಾರೋ ತೆಲುಗಿನಲ್ಲಿ ಕೃಪಲಾನಿ ಗೋಪಿಚಂದ್ ಪ್ರಸಿದ್ಧರು. ಅವರ ಕೃತಿಗಳಲ್ಲಿಯೂ ಪ್ರಖರ ವೈಚಾರಿಕ ಗುಣ ಎದ್ದು ಕಾಣುತ್ತದೆ. ನನಗೂ ಆ ಅಂಶವೇ ಇಷ್ಟವಾಗಿ ಸಿನಿಮಾ ಮಾಡಲು ಹೊರಟಿದ್ದೇನೆ' ಎನ್ನುವ ಇಂದ್ರಬಾಬು ಅವರ ಮಾತುಗಳಲ್ಲಿ ಜನಮೆಚ್ಚುವ ಮತ್ತೊಂದು ಸಿನಿಮಾ ಮಾಡುವ ವಿಶ್ವಾಸ ಎದ್ದುಕಾಣುತ್ತದೆ.